SRI K.C. MODAGEKAR : What is the criterion to decide the mother tongue as to whether it is Kannada or Marathi?

ಶ್ರೀ ಎಂ.ವೀರಪ್ಪ ಮೊಯಿಲಿ : ಈಗ ಒಬ್ಬರ ಮಾತೃಭಾಷೆಯು ಕನ್ನಡ ಅಥವಾ ಮರಾಠಿ ಎಂದು ತಿಳಿದುಕೊಳ್ಳುವುದಕ್ಕೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಂಥ ಯಾವ ತೊಂದರೆಯೂ ಇಲ್ಲ. ನಾವು ಅದನ್ನು ಪರೀಕ್ಷೆ ಮಾಡುತ್ತೇವೆ. ದುರುಪಯೋಗವಾದರೆ ಅದರ ಬಗ್ಗೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

Sri K.C.Modagekar : Just now the Hon.Member Sri M.S. Patil told that a marathi speaking person has got admission. That is why I am asking this question.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಹೆಣ್ಣೂರು - ಬಾಣಸವಾಡಿ ಬಡಾವಣೆ ಬಗ್ಗೆ

1675 - ಶ್ರೀ ಎಂ.ಪಿ.ವೆಂಕಟೇಶ್ (ಹೆಗ್ಗಡದೇವನ ಕೋಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಹೆಣ್ಣೂರು - ಬಾಣಸವಾಡಿ ಬಡಾವಣೆಯ ನಿವಾಸಿಗಳು ಸಾರಿಗೆ ಸೌಲಭ್ಯ ಒದಗಿಸುವಂತೆ ನಗರ ಸಾರಿಗೆ ಅಧಿಕಾರಿಗಳನ್ನು 5-6ವರ್ಷಗಳಿಂದ ಕೋರುತ್ತಿದ್ದರೂ ಕೂಡ ಇದುವರೆವಿಗೂ ಸೌಲಭ್ಯ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಡಾವಣೆಯಲ್ಲಿ ಶೇ. 50ಕ್ಕೂ ಹೆಚ್ಚು ಮನೆಗಳಿದ್ದಾಗ್ಯೂ ಕೂಡ ಬೆಂಗಳೂರಿನ ಇತರ ಬಿ.ಡಿ.ಎ. ಬಡಾವಣೆಗಳಿಗೆ ಒದಗಿಸಿದಂತೆ ಸಾರಿಗೆ ಸೌಲಭ್ಯ ಒದಗಿಸದಿರಲು ಕಾರಣವೇನು ಮತ್ತು ಅದನ್ನು ಯಾವಾಗ ಒದಗಿಸಲಾಗುವುದು ಎಂಬುದನ್ನು ತಿಳಿಯಪಡಿಸುವರೆ?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಅಗತ್ಯಕ್ಕೆ ತಕ್ಕಷ್ಟು ಸಂಖ್ಯೆಯ ಬಸ್ಸುಗಳನ್ನು ಒದಗಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಚಿಕ್ಕಬಳ್ಳಾಪುರದ ಕಾಲೇಜಿನಲ್ಲಿ ರೇಷ್ಮೆ ಕೃಷಿ ಶಿಕ್ಷಣದ ಪ್ರಾರಂಭ

1196 - ಶ್ರೀ ಸಿ.ವಿ. ವೆಂಕಟರಾಯಪ್ಪ (ಬಾಗೇಪಲ್ಲಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಬಳ್ಳಾಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರೇಷ್ಮೆ ಕೋರ್ಸನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು?*

ಆ) *ಪ್ರತಿ ವರ್ಷ ಈ ಕೋರ್ಸಿಗೆ ಸರ್ಕಾರವು ನಿಗಧಿಪಡಿಸಿದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ ಎಷ್ಟು?*

ಇ) *ಈ ಕೋರ್ಸಿಗೆ ಪ್ರತಿ ವರ್ಷ ಸೇರಿಸಿಕೊಂಡ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?*

ಈ) *ಈ ವಿದ್ಯಾರ್ಥಿಗಳ ಪೈಕಿ, ಹೊರ ರಾಜ್ಯದಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?*

ಉ) *ಇತರೆ ಕಾಲೇಜುಗಳಲ್ಲಿ ರೇಷ್ಮೆ ಕೋರ್ಸನ್ನು ಪ್ರಾರಂಭಿಸಿ ಅಲ್ಲಿನ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ನಿಗಧಿತವಾಗಿ ಪ್ರಕಟಿಸಿದಂತೆಯೇ ಈ ಕಾಲೇಜಿನ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಿದೆಯೇ?*

ಊ) ಈ ಕಾಲೇಜಿನಲ್ಲಿ ರೇಷ್ಮೆಗೆ ಸಂಬಂಧಿಸಿದಂತೆ ಪ್ರಯೋಗ ಶಾಲೆ ಇಲ್ಲದಿರುವುದು ನಿಜವಲ್ಲವೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ಅ) 1985-86ರಲ್ಲಿ

ಆ)

85-86	86-87	87-88	88-89	89-90	90-91
40	40	40	40	40	40
ಇ)					
19	36	69	72	87	115
ಈ)					
—	01	21	31	28	19

ಉ) ಹೌದು. ಆದರೆ, ಅಕ್ಟೋಬರ್-ನವೆಂಬರ್ 1990ರಲ್ಲಿ ನಡೆದ ಅಂತಿಮ ವರ್ಷದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕಟಿಸುವಲ್ಲಿ ವಿಳಂಬವಾಗಿದೆ.

ಊ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಮುಂಡಿಸಬೇಕು.

ಶ್ರೀ ವೀರಪ್ಪ ಮೊಯಿಲಿ : ದಿನಾಂಕ 20-3-91ರ ಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 80 ಪ್ರಶ್ನೆಗಳ ಪೈಕಿ, ಪ್ರಶ್ನೆ ಸಂಖ್ಯೆ 1642, 1658, 1650, 1403, 1404, 1544, 1676, 1674, 1673, 1140, 1689, 1137, 1425, 1202 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನೂಳಿದ 66 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಗ್ರಾಮಾಂತರ ಪ್ರದೇಶದ ಬಸ್ಸುಗಳ ಟಾಪ್ ಮೇಲೆ ಪ್ರಯಾಣಿಕರು ಕುಳಿತುಕೊಳ್ಳುವುದರ ಬಗ್ಗೆ.

1396 - ಶ್ರೀ ಆರ್ ಬಿ ಚೌದರಿ (ಸಿಂದಗಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಕ.ರಾ.ರ.ಸಾ.ಸಂಸ್ಥೆಯ ಬಸ್ಸುಗಳ ಟಾಪ್ ಮೇಲೆ ಕುಳಿತರೂ ಬಸ್ಸುಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜನತೆಯ ಅವಶ್ಯಕತೆಗನುಗುಣವಾಗಿ ಬಸ್ಸುಗಳನ್ನು ಓಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಅಜೀಜ್ ಸೇಠ್, (ಸಾರಿಗೆ ಸಚಿವರು):

ಅ) ಹೌದು.

ಕೊಲ್ಲಿ ಯುದ್ಧದ ಪ್ರಯುಕ್ತ ಇಂಧನ ಸರಬರಾಜು ಕಡಿಮೆಯಾದ್ದರಿಂದ ಕೆಲವು ಮಾರ್ಗ ಸೂಚನೆಗಳನ್ನು ಕಡಿತಗೊಳಿಸಲಾಗಿದೆ.